**ಇಂದು ದಿನಾಂಕ 04.09.2025 ರಂದು ಡಿಡಬ್ಲ್ಯೂ -6 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

**1.** ನಾನು ಪತ್ರ ಬರಹಗಾರ. ನಾನು 2011 ರಿಂದ ಆ ಕೆಲಸ ಮಾಡುತ್ತಿದ್ದೇನೆ. ನಾನು ಕ್ರಯಪತ್ರ, ವಿಲ್, ದಾನಪತ್ರ ಮತ್ತು ಹಕ್ಕುನಿವೃತ್ತಿ ಪತ್ರಗಳನ್ನು ಬರೆಯುತ್ತೇನೆ. ಮಾಲಿಕರ ಹೆಸರಿನಲ್ಲಿ ಆಸ್ತಿಗಳು ಇದ್ದರೆ ಮಾತ್ರ ನಾನು ವಿಲ್ ಬರೆಯುತ್ತೇನೆ. ಒಟ್ಟು ಕುಟುಂಬದಲ್ಲಿ ಯಜಮಾನನ ಹೆಸರಿನಲ್ಲಿ ಆಸ್ತಿಗಳು ಇರುತ್ತವೆ ಎಂದರೆ ಇರಬಹುದು ಇಲ್ಲದೆಯೂ ಇರಬಹುದು ಎನ್ನುತ್ತಾರೆ. ವಿಲ್ ಬರೆಯಬೇಕಾದರೆ ಅವರಿಗೆ ಸೇರಿದ ಸ್ವಯಾರ್ಜಿತ ಆಸ್ತಿಗಳಾಗಿರಬೇಕು ಎಂದರೆ ನಿಜ. ಮುನಿಯಪ್ಪನವರು ವಿಲ್ ನ್ನು ಬರೆಯಲು ಹೇಳಿದ್ದರು. 2017 ರಲ್ಲಿ ನನ್ನ ಹತ್ತಿರ ಬಂದಿದ್ದರು. ಮೊದಲು ಬಂದರು ಪತ್ರ ಬರೆಸಿದರು ತಡವಾದ ಕಾರಣ ನಾಳೆ ಬನ್ನಿ ಎಂದಾಗ 2-3 ದಿನ ಬಿಟ್ಟು ಬಂದರು. ವಿಲ್ ಬರೆಯಬೇಕಾದರೆ ಅವರ ಮಾನಸಿಕ ಸ್ಥಿತಿ ಮತ್ತು ಆರೋಗ್ಯ ಸರಿಯಾಗಿ ಇತ್ತು. ಮುನಿಯಪ್ಪನ ಜೊತೆಯಲ್ಲಿ ಪ್ರಸಾದ್ ರೆಡ್ಡಿ ಮತ್ತು ವೇಣು ಎಂಬ ಇಬ್ಬರು ಬಂದಿದ್ದರು. ಪ್ರಸಾದ್ ರೆಡ್ಡಿರವರು ವಿಲ್‌ನ ಸಾಕ್ಷಿದಾರರು. ಮುನಿಯಪ್ಪನವರು ನನ್ನ ಮನೆಗೆ ಬಂದು ಹೋಗುತ್ತಿದ್ದ ಕಾರಣ ಪರಿಚಯ. ನನ್ನ ತಂದೆಗೆ ಅವರು ಚೆನ್ನಾಗಿ ಗೊತ್ತು. ಮುನಿಯಪ್ಪನವರು ಆರ್.ಟಿ.ಸಿ., House List ದಾಖಲೆಗಳನ್ನು ಕೊಟ್ಟಿದ್ದರು. ಯಾವ ದಾಖಲೆಗಳು ಎಂದು ನೆನಪಿಲ್ಲ. ರಮೇಶ್, ಪುರಷೋತಮ ಎನ್ನುವವರು ನನಗೆ ಪರಿಚಯವಿಲ್ಲ. ಅವರು ಮುನಿಯಪ್ಪನ ಮಕ್ಕಳು. ಮುನಿಯಪ್ಪನವರ ಆರೋಗ್ಯ ಸರಿ ಇರಲಿಲ್ಲ ಅವರಿಗೆ ಲಕ್ವ ಇತ್ತು ಎಂದರೆ ಕೈ ಮಾತ್ರ ಅದರುತ್ತಿತ್ತು ಎನ್ನುತ್ತಾರೆ. ಆ ಸಮಯದಲ್ಲಿ ಮಾನಸಿಕ ಸ್ಥಿರತೆ ಇರುವುದಿಲ್ಲ ಎಂದರೆ ಚೆನ್ನಾಗಿದ್ದರು ಎನ್ನುತ್ತಾರೆ. ಮುನಿಯಪ್ಪನವರು ಆರೋಗ್ಯವಾಗಿದ್ದ ಬಗ್ಗೆ ದಾಖಲೆ ತರಲು ಹೇಳಿದ್ದೀರ ಎಂದರೆ ಅವರು ಆರೋಗ್ಯವಾಗಿದ್ದರು ಎನ್ನುತ್ತಾರೆ. ಅವರು ಆರೋಗ್ಯವಾಗಿರಲಿಲ್ಲ ನನ್ನ ಹತ್ತಿರ ಬರುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮುನಿಯಪ್ಪನಿಗೆ ಯಾವ ರೀತಿ ಆಸ್ತಿ ಬಂದಿತ್ತು ಎಂದು ಕೇಳಿದ್ದೀರ ಎಂದರೆ ಸ್ವಯಾರ್ಜಿತ ಎಂದು ಹೇಳಿದ್ದರು ಎನ್ನುತ್ತಾರೆ. ಅವರಿಗೆ ಎಷ್ಟು ಜನ ಮಕ್ಕಳು ಎಂದು ಹೇಳಿದ್ದರು ನನಗೆ ನೆನಪಿಲ್ಲ. ಮುನಿಯಪ್ಪನಿಗೆ 2015 ರಿಂದ ಆರೋಗ್ಯ ಸರಿ ಇರಲಿಲ್ಲ ಅವರಿಗೆ ಓಡಾಡಲು ಆಗುತ್ತಿರಲಿಲ್ಲ ಎಂದರೆ ಸುಳ್ಳು. ನಾನು ಸಾಕ್ಷಿದಾರರು ಮುನಿಯಪ್ಪ ಸೇರಿ ತೊಂದರೆ ಕೊಡಲು ವಿಲ್‌ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದಲ್ಲಿ ಅವರ ಮೇಲೆ 2003 ರಿಂದ ದಾವೆ ನಡೆಯುತ್ತಿದೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ.

ಪ್ರಸಾದ್ ರೆಡ್ಡಿ ನನಗೆ ಪರಿಚಯವಿಲ್ಲ. ಮುನಿಯಪ್ಪನವರು ಅವರನ್ನು ಕರೆದುಕೊಂಡು ಬಂದಿದ್ದರು. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಆ ವಿಚಾರ ನನಗೆ ಗೊತ್ತಿಲ್ಲ. ಮುನಿಯಪ್ಪನವರಿಗೆ ಆ ಸಮಯದಲ್ಲಿ ಎಷ್ಟು ವಯಸ್ಸು ಎಂದು ನೆನಪಿಲ್ಲ. ಅವರಿಗೆ ಆ ಸಮಯದಲ್ಲಿ 85-90 ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಮುನಿಯಪ್ಪನವರಿಗೆ 85 ವರ್ಷ ಆಗಿದೆ ಎಂದು ವಿಲ್ ನಲ್ಲಿ ನಮೂದಿದೆ. ಮುನಿಯಪ್ಪನವರು ತುಂಬಾ ಓದಿದ್ದಾರೆ ಎಂದರೆ ಹೌದು. ಮುನಿಯಪ್ಪನವರು ಎಲ್ಲಾ ದಾಖಲೆಗಳಲ್ಲೂ ಸಹಿ ಮಾಡುತ್ತಿದ್ದರು ಎಂದರೆ ನಿಜ. ಆ ದಿನ ಕೈ ನಡಗುತ್ತಿದ್ದ ಕಾರಣ ಹೆಬ್ಬೆಟ್ಟನ್ನು ಹಾಕಿದರು ಎನ್ನುತ್ತಾರೆ. ಅವರು ಆ ಸಮಯದಲ್ಲಿ ಏನು ಹೇಳುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸುಳ್ಳು. ಅವರು ವಿಲ್ ಬರೆಯಲು ಇಚ್ಚೆ ಪಟ್ಟಿರಲಿಲ್ಲ ಎಂದರೆ ಸುಳ್ಳು. ಅವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಿಲ್‌ನಲ್ಲಿರುವ ಹೆಬ್ಬೆಟ್ಟಿನ ಗುರುತು ಮುನಿಯಪ್ಪನಿಗೆ ಸೇರಿಲ್ಲ ಎಂದರೆ ಸರಿಯಲ್ಲ. ಮೊಮ್ಮಕ್ಕಳ ಹೆಸರಿಗೆ ಅವರು ವಿಲ್ ಬರೆಸಿದ್ದಾರೆ ಅಷ್ಟೊಂದು ನೆನಪಿಲ್ಲ. ಸುಮಾರು 10-12 ಆಸ್ತಿಗಳು ಇದ್ದವು. ಮುನಿಯಪ್ಪನ ಮಗ ಸೊಣ್ಣೇಗೌಡ ಎನ್ನುವವರು ಈ ದಾವೆಯನ್ನು ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಅವರ ಜೊತೆ ಶಾಮೀಲಾಗಿ ಸುಳ್ಳು ವಿಲ್ ನ್ನು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**